
# ಸಿದ್ಧಪುರುಷ ಸಿದ್ಧಾರೂಢರು

ಸರಸ್ವತಿ ವಿಜಯನಾರಸಿಂಹ

ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿರುವ ಯೋಗಿವರೇಣ್ಯ ಶಿವಯೋಗಿ ಸಿದ್ಧಾರೂಢರ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿಯ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಮಹಾನುಭಾವರು ಎಲ್ಲೇ ಜನಿಸಲಿ ತಮ್ಮಿಂದ ಸಮಾಜದ ಉದ್ಧಾರವಾಗುವುದನ್ನೇ ಗುರಿಯಾಗಿಟ್ಟುಕೊಂಡು ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುತ್ತಾರೆ. ಪ್ರಪಂಚದ ನಶ್ವರತೆಯನ್ನು ಸಾಧಾರಣ ಮನುಷ್ಯನಿಗೆ ತಿಳಿಯಪಡಿಸಿ ಮಾಯಾಮೋಹದ ಜಾಲದಿಂದ ಸಾಧ್ಯವಾದಷ್ಟು ಜನರ ಉದ್ಧಾರವನ್ನು ಮಾಡುತ್ತಾರೆ. ಈ ದಿಸೆಯಲ್ಲಿ ಕನ್ನಡ ನಾಡಿನಲ್ಲಿ ಅನೇಕಾನೇಕ ಮಹಾಪುರುಷರು ಜನ್ಮ ತಳೆದು ತಮ್ಮ ಸಹಮಾನವರ ಬದುಕಿಗೆ ದಾರಿದೀಪವಾಗಿದ್ದಾರೆ.



ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಚಳಕಾಪುರ, ಸಿದ್ಧಾರೂಢರ ಜನ್ಮಸ್ಥಳ. ಇವರ ತಂದೆ ಗುರುಶಾಂತಪ್ಪ. ತಾಯಿ ದೇವಮಲ್ಲಮ್ಮ. ಈ ದಂಪತಿಗಳು ಪರಮ ದೈವಭಕ್ತರು. ಎಂದೂ ಪರರ ಸ್ವತ್ತಿಗೆ ಆಸೆ ಪಟ್ಟವರಲ್ಲ. ಕಾಯಕದಲ್ಲಿ ನಂಬಿಕೆಯನ್ನು ಇಟ್ಟು ಪಾಲಿಗೆ ಬಂದುದೇ ಪಂಚಾಮೃತ ಎಂದು ಭಾವಿಸಿ ತೃಪ್ತಿಯ ಜೀವನ ವನ್ನು ನಡೆಸುತ್ತಿದ್ದರು.

ಒಮ್ಮೆ ಈ ದಂಪತಿಗಳಿಗೆ ಶಿವನೇ, "ನಿಮ್ಮ ಮಗನಾಗಿ ಬರುತ್ತೇನೆ" ಎಂದು ಹೇಳಿದಂತೆ ಕನಸಾಯಿತು. ಅವರ ನಿರೀಕ್ಷೆಯಂತೆ, ಎರಡೇ ವರ್ಷಗಳಲ್ಲಿ ದುರ್ಮುಖಿ ಸಂವತ್ಸರದ ಚೈತ್ರಮಾಸದ ಶುದ್ಧ ನವಮಿಯಂದು ಸಿದ್ಧಾರೂಢರ ಜನನವಾಯಿತು. ಊರಿನ ಜನಕ್ಕೆಲ್ಲಾ ಸಂತೋಷ ಸಂಭ್ರಮ. ಗುರುಶಾಂತಪ್ಪ ತಮ್ಮ ಮನೆಯಲ್ಲಿ ಶಿವನ ಅವತಾರವಾಗಿದೆಯೆಂದು ಊರಿಗೆಲ್ಲಾ ಸಿಹಿ ಹಂಚಿ, ಬಡಬಗ್ಗರಿಗೆ ತನ್ನ ಕೈಲಾದಷ್ಟು ಅನ್ನದಾಸೋಹ ನಡೆಸಿದ.

ಮಗು ಸಿದ್ಧಾರೂಢ ವಿಶಿಷ್ಟ ಗುಣಸಂಪನ್ನನಾಗಿ ಬೆಳೆದು ಬಂದ. ಅವನ ಬಾಲಲೀಲೆಗಳೂ ಸರ್ವೇಸಾಮಾನ್ಯವಾಗಿರಲಿಲ್ಲ. ಅವುಗಳಲ್ಲಿ ಒಂದು ವಿಶಿಷ್ಟತೆ ಕಾಣಬರುತ್ತಿತ್ತು. ಸಾಧಾರಣವಾದ ಆಟಿಕೆಗಳು ಈ ಶಿಶುವಿಗೆ ಬೇಕಾಗುತ್ತಿರಲಿಲ್ಲ. ದೇವತಾವಿಗ್ರಹಗಳನ್ನಿಟ್ಟುಕೊಂಡೇ ಇವನು ಭಾವುಕನಾಗುತ್ತಿದ್ದ. ಬಾಲಕ ಸಿದ್ಧಾರೂಢನಿಂದ ಅಸಾಮಾನ್ಯ ಲೀಲೆಗಳು ನಡೆಯುತ್ತಲೇ ಇದ್ದುವು. ಹಳ್ಳಿಯ ಮುಗ್ಧಜನಕ್ಕೆ ಇದು ದೈವತ್ವದ ನಿದರ್ಶನವೆಂದೇ ಭಾಸವಾಗುತ್ತಿತ್ತು.

ಸಮಾಜಘಾತಕ ಜನರಿಂದ ಮುಗ್ಧ ಜೀವಿಗಳನ್ನು ಪಾರು ಮಾಡಿ ಅವರನ್ನು ಉದ್ಧರಿಸುವುದೇ ತಮ್ಮ ಜೀವನದ ಗುರಿ ಎಂದು ತೀರ್ಮಾನಿಸಿದ ಸಿದ್ಧಾರೂಢರು ತಮ್ಮ ಒಂಬತ್ತನೆಯ ವಯಸ್ಸಿನಲ್ಲಿಯೇ ಸಂನ್ಯಾಸ ಸ್ವೀಕರಿಸಿದರು.

ಮಗನಿಗೆ ಹಾತೊರೆದು ಕಾಡುಮೇಡುಗಳೆನ್ನದೆ ಅರಸಿ ಅಲೆದು ತನ್ನನ್ನು ನೋಡಲು ಬಂದ ತಾಯಿಗೆ, ಮಾನವ ಜೀವನದ ನಶ್ವರತೆಯನ್ನು ಸಿದ್ಧಾರೂಢರು ಬೋಧಿಸಿದರು. ಗುರಿ ಸಾಧಿಸಲು ಸಂನ್ಯಾಸ ದೀಕ್ಷೆಯೊಂದೇ ಸೂಕ್ತವಾದ ಮಾರ್ಗ; ಜಗದ ಜಂಜಡವನ್ನು ಬಾಲ್ಯದಲ್ಲಿಯೇ ಕಳೆದುಕೊಳ್ಳುವುದು ಒಳ್ಳೆಯದು; ಸತ್ಯಸಂಶೋಧನೆಗೆ ಎಳೆತನವೇ ಸೂಕ್ತ; ಎಳೆಯಪ್ರಾಯದಲ್ಲಿ ಮನಸ್ಸೂ ಶುದ್ಧವಾಗಿರುತ್ತದೆ; ಆಗಲೇ ಅದಕ್ಕೆ ಭಕ್ತಿಯ ನೊಗವಿಟ್ಟು ಚಾಂಚಲ್ಯದಿಂದ ದೂರವಾಗಿಸಬೇಕು – ಹೀಗೆ ಸಿದ್ಧಾರೂಢರು ತಮ್ಮ ತಾಯಿಗೆ ತಿಳಿಹೇಳಿ ಗುರುವನ್ನರಸುತ್ತಾ ಹೊರಟರು. ಅಮರಗುಂದದ ಗಜದಂಡಸ್ವಾಮಿಗಳನ್ನು ಗುರುವಾಗಿ ಪಡೆದರು. ಗುರು ಶಿಷ್ಯನನ್ನು ಪರೀಕ್ಷಿಸಿದಂತೆ ಶಿಷ್ಯನೂ ಗುರುವನ್ನು ಪರೀಕ್ಷಿಸಿಯೇ ಅವರನ್ನು ಗುರುವಾಗಿ ಪರಿಗ್ರಹಿಸಿದ.

ಗುರುವಿಗೆ ಶಿಷ್ಯನ ವಿನಯ ಗುಣ, ಪರೀಕ್ಷಕ ಮನೋಭಾವಗಳು ಮೆಚ್ಚುಗೆಯಾದವು. ಗುರುವಿಗೆ ಸೇರಿದ ಕುದುರೆಯ ಲಾಯವನ್ನು ಶುದ್ಧ ಮಾಡುವುದು, ಕುದುರೆಯ ಆಹಾರವಾದ

ಹುರುಳಿಯನ್ನು ಬೇಯಿಸಿ ತಿನ್ನಿಸುವುದು, ಶುದ್ಧವಾದ ಹುಲ್ಲನ್ನು ಸಂಗ್ರಹಿಸಿ ಅದರ ಮುಂದೆ ಇಡುವುದು – ಈ ಸೇವಾ ಕಾರ್ಯಗಳು ಗುರುಕೃಪೆಯನ್ನು ಶಿಷ್ಯ ಬೇಗ ಪಡೆಯುವ ಸುಲಭ ಉಪಾಯಗಳಾದುವು. ಬಾಲಕನ ಕಾರ್ಯತತ್ಪರತೆ, ನಿಷ್ಠೆ ಗುರುವನ್ನು ಅವನತ್ತ ಸೆಳೆಯಿತು. ಗುರುವಿತ್ತ ಯಾವ ಕಷ್ಟದ ಕೆಲಸವೂ ಶಿಷ್ಯನಿಗೆ ಕಠಿಣವೆನ್ನಿಸುತ್ತಿರಲಿಲ್ಲ. ಸಹಜಸುಲಭವಾಗಿ ಅದನ್ನು ನಿರ್ವಹಿಸುತ್ತಿದ್ದ. ಇದರಿಂದ ಮೆಚ್ಚಿದ ಗುರು, ಶಿಷ್ಯನಿಗೆ ತಮ್ಮ ಬಳಿಯೇ ಇರಲು ಅವಕಾಶ ಮಾಡಿಕೊಟ್ಟರು.

ಅಂದಿನಿಂದ ಶಿಷ್ಯನಿಗೆ ಕ್ರಮವಾದ ಶಿಕ್ಷಣ ದೊರೆಯ ಲಾರಂಭಿಸಿತು. ವೇದ, ಆಗಮ, ತರ್ಕಶಾಸ್ತ್ರ, ಮೀಮಾಂಸಾ ಶಾಸ್ತ್ರ ಮೊದಲಾದ ಎಲ್ಲ ಪ್ರಕಾರಗಳಲ್ಲೂ ಶಿಷ್ಯನಿಗೆ ಶಿಕ್ಷಣ ದೊರೆಯಿತು. ಸಿದ್ಧಾರೂಢನು ಗುರುವಿನ ಪೂರ್ಣ ಅನುಗ್ರಹಕ್ಕೆ ಪಾತ್ರನಾದ.

ಈ ಸಿದ್ಧನ ಮನಸ್ಸು ಮೊದಲಿಂದಲೂ ಬ್ರಹ್ಮನಲ್ಲಿಯೇ ಆರೂಢವಾಗಿದ್ದುದರಿಂದ ಗುರುಗಳು ಇವರಿಗೆ 'ಸಿದ್ಧಾರೂಢ ಭಾರತಿ' ಎಂದೇ ಹೆಸರು ಕೊಟ್ಟರು. "ಮಹಾಯೋಗಿಯಾಗಿ ಧರ್ಮಬೋಧೆಯನ್ನು ಅನವರತ ನಡೆಸು" ಎಂದು ಹರಸಿ ಕಳಿಸಿಕೊಟ್ಟರು.

ಸಂಚಾರ ಮಾಡುತ್ತ ಸಿದ್ಧಾರೂಢರು ಭಾರತದಾದ್ಯಂತ ಸುತ್ತಾಡಿದರು. ಅನೇಕ ಮಹಾಪುರುಷರನ್ನು ಸಂಧಿಸಿದರು. ಹಿಮಾಲಯದ ಕೊರೆಯುವ ಚಳಿಯಲ್ಲೂ, ಒಂದೇ ಕಾವಿ ಬಟ್ಟೆಯನ್ನು ಧರಿಸಿ, ಅಮರನಾಥನನ್ನೂ, ಬದರಿನಾಥನನ್ನೂ ಸಂದರ್ಶಿಸಿ ಪುಳಕಿತಗೊಂಡರು.

ಸಿದ್ಧಾರೂಢರು ಹೋದೆಡೆಯೆಲ್ಲಾ ಅವರ ಮಹಿಮೆ ವ್ಯಕ್ತವಾಗುತ್ತಿತ್ತು. ತಿಳಿಗನ್ನಡದಲ್ಲಿನ ಅವರ ವಚನಗಳಿಗೆ ಮಾರುಹೋಗದವರೇ ಇಲ್ಲ. ಸಾಮಾನ್ಯ ಜನರ ನಾಲಿಗೆಯ ಮೇಲೆ ಅವರ ವಚನಗಳೇ ನಲಿಯುತ್ತಿತ್ತು. ಈ ಜನಪ್ರಿಯತೆಗೆ ಪಂಡಿತರು ಬೆರಗಾಗಿದ್ದರು. 'ಗರಗ' ಎಂಬ ಗ್ರಾಮದ ಮಡಿವಾಳಪ್ಪನವರಿಗೆ, ಸಂಸ್ಕೃತ ಮಾತ್ರವಲ್ಲದೆ ಇನ್ನೂ ಹದಿನೈದು ಭಾಷೆಗಳು ಸರಾಗವಾಗಿ ತಿಳಿದಿದ್ದುವು. ಅಂಥ ವಿದ್ವಾಂಸರು ಕೂಡ ಸಿದ್ಧಾರೂಢರ ವಚನಗಳನ್ನು ತುಂಬ ಹೊಗಳುತ್ತಿದ್ದರು. "ಇಂಥ ಸುಲಲಿತ ಸರಳ ಸಾಹಿತ್ಯವು ನಮ್ಮ ಬಳಿಯೇ ದೊರಕುವಾಗ, ದೂರದ ಕಾಶಿಗೆ ಹೋಗಿ ಸಂಸ್ಕೃತ ಕಲಿತು ಬಂದುದೇ ವ್ಯರ್ಥ. ಈ ಮಹಾನುಭಾವನ ಸಾಧನೆಯ ಮುಂದೆ ನಮ್ಮದೇನೂ ಇಲ್ಲ" ಎಂದು ಹಲವರೊಂದಿಗೆ ಅವರು ಹೇಳಿಕೊಂಡಿದ್ದರು. ಸಿದ್ಧಾರೂಢರಿಗೆ, ಗರಗದಲ್ಲಿ ತಮ್ಮ ವೇದಪಾಠಶಾಲೆಯಲ್ಲಿ ಕೆಲಕಾಲ ತಂಗುವ ವ್ಯವಸ್ಥೆ ಮಾಡಿದ್ದರು. ಆತ್ಮಜ್ಞಾನವನ್ನು ಪಡೆಯಲು ಸಿದ್ಧಾರೂಢರಲ್ಲಿಗೆ ಬರುವವರಿಗೆ ಒಳ್ಳೆಯ ಬೋಧನೆ ದೊರೆಯುತ್ತಿತ್ತು.

ಹಸಿದಾಗ ಒಂದು ತುತ್ತು ಅನ್ನ, ಮೈ ಮುಚ್ಚಲು ತುಂಡು ಅರಿವೆ – ಇಷ್ಟನ್ನು ಬಿಟ್ಟು ಸಿದ್ಧಾರೂಢರು ತಮ್ಮ ಬಳಿ ಬೇರೇನನ್ನೂ ಇಟ್ಟುಕೊಂಡಿರುತ್ತಿರಲಿಲ್ಲ. ಮಿತಾಹಾರಿಯಾದ ಸಿದ್ಧರು ಎಂದೂ ತಮ್ಮ ವಾಡಿಕೆಯ ಆಹಾರದ ಮಿತಿಯನ್ನು ಮೀರಿ ಒಂದು ತುತ್ತು ಅನ್ನವನ್ನೂ ಹೆಚ್ಚಿಗೆ ಸೇವಿಸುತ್ತಿರಲಿಲ್ಲ. ಆ ಮೂಲಕ ದೇಹಕ್ಕೆ ಜಡತ್ವ ಬರಲು ಅವರು ಅವಕಾಶ ಕೊಟ್ಟವರೇ ಅಲ್ಲ.

**ಶಿವಾನುಭವದ ಆನಂದಾನುಭೂತಿ ಉಕ್ಕಿ ಅವರ ಬಾಯಿಂದ ಹೊರಹೊಮ್ಮುತ್ತಿದ್ದುದೇ ವಚನಗಳಾದುವು. ಯಾವುದೋ ಒಂದು ಸಂದರ್ಭ ಅವರ ಮನಸ್ಸನ್ನು ಕಲಕಿದಾಗ, ಅಪೂರ್ವ ಅನುಭವವಾದಾಗ ಅವರ ಮನಸ್ಸಿನಾಳದಿಂದ ವಚನಗಳು ಹೊರಹೊಮ್ಮುತ್ತಿದ್ದುವು.**

ಭಕ್ತಜನ ಗುರುವಿನ ಅಮೃತವಾಕ್ಯಗಳನ್ನು ಆಲಿಸಲು ತಂಡೋಪತಂಡವಾಗಿ ಬರುತ್ತಿದ್ದರು. ಅವರಿದ್ದಲ್ಲಿ ಜನ ಸೇರುತ್ತಿದ್ದರು. ಸಿದ್ಧರು ಯಾರ ಮನಸ್ಸನ್ನೂ ನೋಯಿಸಿದವರಲ್ಲ; ಎಲ್ಲರ ಸಮಸ್ಯೆಗಳಿಗೂ ಅವರಲ್ಲಿ ಪರಿಹಾರ ದೊರೆಯುತ್ತಿತ್ತು. ಸರಳ ಸೌಜನ್ಯಮೂರ್ತಿಯಾಗಿದ್ದ ಸಿದ್ಧಾರೂಢರು ಜನರಿಗೆ ಹಿತವಾಗುವುದನ್ನೇ ಎಂದಿಗೂ ನುಡಿಯುತ್ತಿದ್ದರು. ಭಕ್ತರ ಜಾತಿ ಬೇರೆಬೇರೆಯಾಗಿದ್ದರೂ ಗುರುವಿನಲ್ಲಿ ಜಾತಿ ಭೇದಗಳಿಲ್ಲದುದ ರಿಂದ ಅವರೆಲ್ಲರೂ ಐಕ್ಯಭಾವದಿಂದ ಬೆರೆಯುತ್ತಿದ್ದರು.

ಹೀಗೆ ತುಂಬು ಜೀವನ ನಡೆಸಿದ ಸಿದ್ಧಾರೂಢರು ತಮ್ಮ ತೊಂಬತ್ತೆರಡನೆಯ ವಯಸ್ಸಿನಲ್ಲಿ ಸಜೀವ ಸಮಾಧಿ ಯನ್ನು ಪಡೆದರು. ಮೂರು ದಿನ ಮೌನಿಯಾಗಿದ್ದ ಅವರು ಅಖಂಡ ಶಿವಸಂಕೀರ್ತನೆ ಮತ್ತು ದಾಸೋಹದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಾವೇ ನಿಂತು ಅನ್ನ, ಪಾಯಸಗಳನ್ನು ಉಣಬಡಿಸಿ ಜಂಗಮರನ್ನು ತೃಪ್ತಿಗೊಳಿಸಿದರು. ಶಿವಸ್ಮರಣೆಯಲ್ಲಿಯೇ ಅವರ ಉಸಿರು ಏರಿಳಿಯುತ್ತಿತ್ತು. ದಾಸೋಹದಿಂದ ಜೀವಿಗಳನ್ನು ತೃಪ್ತಿಪಡಿಸಿ, ಸದೇಹಿಯಾಗಿ ಸಮಾಧಿ ಪಡೆದು ಶಿವಸ್ಮರಣೆಯನ್ನು ಮಾಡುತ್ತಿದ್ದ ಆ ಪುಣ್ಯಜೀವ, ಶಿವರಾತ್ರಿಯಂದು ಪರಶಿವನಲ್ಲಿ ಲೀನವಾಗಿ ಹೋಯಿತು.

ಹುಬ್ಬಳ್ಳಿಯಲ್ಲೂ, ಐರಣಿಯಲ್ಲೂ ಸಿದ್ಧಾರೂಢರ ಗದ್ದುಗೆಗಳಿವೆ. ಸಿದ್ಧಾಶ್ರಮ ಮತ್ತು ಅವಧೂತ ಆಶ್ರಮಗಳು ಐರಣಿಯಲ್ಲಿವೆ. ಸಿದ್ಧಾರೂಢರ ಶಿಷ್ಯರಾದ ಮುಪ್ಪಿನಾರ್ಯ ಮಹಾಸ್ವಾಮಿಗಳ ಸಿದ್ಧೇಶ್ವರ ಆಲಯ ಮತ್ತು ಸಿದ್ಧನಾಯಕನ ಗದ್ದುಗೆ ಐರಣಿ ಬೆಟ್ಟದ ಮೇಲೆ ಸ್ಥಾಪನೆಗೊಂಡಿವೆ.

ಹುಬ್ಬಳಿಯಲ್ಲಿ ಸಿದ್ಧಾರೂಢರ ಮಠ ಮತ್ತು ಗದ್ದುಗೆ ಬಹು ಪ್ರಸಿದ್ಧವಾದುವು. ಸಿದ್ಧಾರೂಢರ ಹೆಸರಿನಲ್ಲಿ ಅನೇಕ ಶೈಕ್ಷಣಿಕ ಕೇಂದ್ರಗಳು ಇಲ್ಲಿ ನಡೆಯುತ್ತಿವೆ. ತಮ್ಮ ಜೀವನದಲ್ಲಿ ಕಂಡುಕೊಂಡ ಪರಮಸತ್ಯವನ್ನು ಸುತ್ತಲಿನ ಜನಕ್ಕೆ ತಿಳಿಯಪಡಿಸಿ, ಸತ್ಯ, ಶಿವ, ಸುಂದರತೆಗಳ ಪ್ರತೀಕವಾಗಿದ್ದ ಸಿದ್ಧಾರೂಢರು ಜನರ ಆರಾಧ್ಯದೈವವಾಗಿ ಇಂದಿಗೂ ಪೂಜೆಗೊಳ್ಳುತ್ತಿದ್ದಾರೆ.